ಈ) ಈಗಾಗಲೇ ಧಾರವಾಡ ಜಿಲ್ಲಾ ಕೇಂದ್ರದಲ್ಲಿ ಹೊರಾಂಗಣ ಕ್ರೀಡಾಂಗಣ ಲಭ್ಯವಿದ್ದು, ಈಗಾಗಲೇ ರೂ. 99.78 ಲಕ್ಷಗಳಿಗೆ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಐಟಿಐ ಕಾಲೇಜು ಸ್ಥಾಪಿಸುವುದು

187(682) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ವ್ಯಾಪ್ತಿಯ ಸಂತ್ರಸ್ತರ ಪುನರ್ವಸತಿ ಕೇಂದ್ರಗಳಲ್ಲಿ ಐ.ಟಿ.ಐ. ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಎಲ್ಲೆಲ್ಲಿ ಈ ರೀತಿಯ ಕೇಂದ್ರಗಳನ್ನು ಮಂಜೂರು ಮಾಡಲು ಉದ್ದೇಶಿಸಿದೆ?

ಇ) ಉದ್ದೇಶಿಸಿದ್ದಲ್ಲಿ ಬಸವನಬಾಗೇವಾಡಿ ತಾಲ್ಲೂಕು ಕೊಲ್ಲಾರ ಹಾಗೂ ಬಿಜಾಪುರ ತಾಲ್ಲೂಕು ಕೃಷ್ಣನಗರಗಳು ಸೇರಲ್ಪಟ್ಟಿವೆಯೇ?

ಈ) ಸೇರ್ಪಡೆಯಾಗಿದ್ದಾರೆ ಯಾವಾಗ ಕಾರ್ಯಾರಂಭ ಮಾಡಲಾಗುತ್ತದೆ?

ಉ) ಪ್ರಾರಂಭಿಸಿದಲ್ಲಿ ಮಂಜೂರಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸರ್ಕಾರ ಇದುವರೆಗೆ ಕೈಗೊಂಡ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು):

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಉ) ಅನ್ವಯಿಸುವುದಿಲ್ಲ.

ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು

188(727) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿರುವ ಮಜರ್ ಗ್ರಾಮಗಳೆಷ್ಟು ತಾಂಡಾಗಳೆಷ್ಟು?

ಆ) ಮಜರ್ ಗ್ರಾಮಗಳನ್ನು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಇದ್ದಲ್ಲಿ ಯಾವಾಗಿನಿಂದ ಕಂದಾಯ ಗ್ರಾಮವೆಂದು ಘೋಷಿಸಲಾಗುತ್ತದೆ?

ಈ) ಇದುವರೆಗೆ ಎಷ್ಟನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲಾಗಿದೆ. (ವಿವರ ನೀಡುವುದು)?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಬಸವನಬಾಗೇವಾಡಿ ತಾಲ್ಲೂಕಿನಲ್ಲಿರುವ ಮಜರ್ ಗ್ರಾಮಗಳ ಸಂಖ್ಯೆ 4

ತಾಂಡಾಗಳ ಸಂಖ್ಯೆ - 10

ಆ) ಇದೆ.

ಇ) ಸರ್ಕಾರದ ಆಳತೆಗೋಲಿನಂತೆ ಅಂದರೆ 100 ಕುಟುಂಬ ಅಥವಾ 500 ಜನ ಸಂಖ್ಯೆ ಇರುವ ತಾಂಡಾಗಳನ್ನು : ಮಜರ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುತ್ತಿತ್ತು. ಈ ಮಾನದಂಡವನ್ನು ಸಡಿಲಿಸಿ ಮಜರ್ : ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇದುವರೆಗೆ ಬಿಜಾಪುರ ಜಿಲ್ಲೆಯಲ್ಲಿ ಆರು ತಾಂಡಾಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸಲಾಗಿದೆ. ಅವುಗಳ ವಿವರ-

(1) ಉಪ್ಪಲದಿನ್ನಿ (2) ಉಕ್ಕಲಿ (3) ಇಂಗಳೇಶ್ವರ (4) ಕೂಡಗಿ

(5) ಸಾತಿಹಾಳ (6) ಉತ್ನಾಳ.

ಮುಜರಾಯಿ ಇಲಾಖೆಗೆ ಸಂಬಂಧಿಸಿದಂತೆ

189(260) ಶ್ರೀ ಚಲುವರಾಯ ಸ್ವಾಮಿ ಎನ್ (ನಾಗಮಂಗಲ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. 1999 ರಿಂದ 2002ನೇ ಸಾಲಿನ ಮಾರ್ಚ್ ವರೆಗೂ ನಾಗಮಂಗಲ ತಾಲ್ಲೂಕಿನ ಎಷ್ಟು ದೇವಾಲಯಗಳಿಗೆ ಧನ ಸಹಾಯ ಮಂಜೂರು ಮಾಡಲಾಗಿದೆ?

2. ಪ್ರತಿಯೊಂದು ದೇವಸ್ಥಾನಕ್ಕೂ ಮಂಜೂರಾದ ಹಣವೆಷ್ಟು ಹಾಗೂ ಮುಂದೆ ಮಂಜೂರು ಮಾಡಬಹುದಾದ ದೇವಸ್ಥಾನಗಳ ಪಟ್ಟಿ ಹಾಗೂ ಧನ ಸಹಾಯದ ವಿವರ ನೀಡುವುದು?

3. ನಾಗಮಂಗಲ ಮತ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಯಿಂದ ಆರಾಧನಾ ಸಮಿತಿ ರಚಿಸದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವಾಗ ರಚಿಸಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

1. ನಾಗಮಂಗಲ ತಾಲ್ಲೂಕಿನ ದೇವಸ್ಥಾನಗಳಿಗೆ ಧನ ಸಹಾಯ ಮಂಜೂರು ಮಾಡಿದ ವಿವರ ಈ ಕೆಳಕಂಡಂತಿದೆ.